

# ಆಹಾ ಸುದ್ದಿ!

★ ಸಸಿತೋಟ

ಈತ ಉಕ್ರೈನಿನ ಇಂಟರ್‌ನೆಟ್ ಪಕ್ಷದ ಮೇಯರ್ ಅಭ್ಯರ್ಥಿ ಡರ್ಥ್ ವೇಡರ್. ಅದ್ಯಾರು ಈತನಿಗೆ ಈ ಉಡುಗೆ ಧರಿಸಿ ಪ್ರಚಾರ ಮಾಡು ಎಂದು ಸಲಹೆ ಕೊಟ್ಟರೋ! ಮುಖ ತೋರಿಸದೆ ಮತ ಕೇಳುವುದು ಎಂದರೆ ಇದೇ ಇರಬಹುದು.

ಚೀನಾದ ಯುನ್ನಾನ್ ಪ್ರಾಂತ್ಯದಲ್ಲಿ ಎಮ್ಮೆಗಳ ಬಾಡಿ ಪೇಂಟಿಂಗ್ ಸ್ಪರ್ಧೆ ನಡೆಯಿತು. ಪಾಶ್ಚಿಮಾತ್ಯ ದೇಶಗಳ ಸಂಪ್ರದಾಯಗಳನ್ನು ಕಡೆಗಣ್ಣಿಂದ ನೋಡುವ ಚೀನಾ ದೇಶವು ಅಮೆರಿಕಾ, ಯೂರೋಪ್ ದೇಶಗಳಲ್ಲಿ ನಡೆಯುವ ಮನುಷ್ಯರ ಬಾಡಿ ಪೇಂಟಿಂಗ್ ಸ್ಪರ್ಧೆ ಲೇವಡಿ ಮಾಡಲು ಇದನ್ನು ನಡೆಸಿರಬಹುದೇ?



ದಕ್ಷಿಣ ಕೊರಿಯಾದ ಸಿಯೋಲ್‌ನಲ್ಲಿ 'ಮಹಿಳಾ ಸ್ನೇಹಿ ಸಿಯೋಲ್' ಎಂಬ ಯೋಜನೆ ಶುರುವಾಗಿದೆಯಂತೆ. ಅದರ ಅಡಿಯಲ್ಲಿ ಪಾರ್ಕಿಂಗ್ ಪ್ರದೇಶದಲ್ಲಿ ಮಹಿಳಾ ಪಾರ್ಕಿಂಗ್ ಎಂದು ಗುಲಾಬಿ ಬಣ್ಣದಲ್ಲಿ ಗುರುತು ಹಾಕಿದ ಜಾಗ ಬಿಟ್ಟಿದ್ದಾರಂತೆ. ಆದರೆ ದೊಡ್ಡ ಜಾಗ ಬಿಟ್ಟಿದ್ದು, ಮಹಿಳೆಯರು ಬಳಸುವ ಕಾರುಗಳು ದೊಡ್ಡ ಗಾತ್ರದವೋ ಅಥವಾ ಮಹಿಳೆಯರೋ ಎಂಬ ಕುಹಕ ಕೇಳಿ ಬರುತ್ತಿದೆಯಂತೆ.




ಸದಾ ರೋಮಾಂಚನ ಬಯಸುವ ಅಮೆರಿಕಾದ ಆ್ಯಂಡಿ ಲೂಯಿಸ್ ಲಾಸ್‌ವೇಗಾಸ್‌ನಲ್ಲಿ ತಂತಿ ನಡಿಗೆಯಲ್ಲಿ ದಾಖಲೆ ಸ್ಥಾಪಿಸಿದ. 480 ಅಡಿ ಎತ್ತರದಲ್ಲಿ 360 ಅಡಿ ದೂರವನ್ನು ಒಂದು ಸಾರಿಯೂ ಕೆಳಗೆ ಬೀಳದೇ ಕ್ರಮಿಸಿದ. ಆರಾಮವಾಗಿ ದಾಖಲೆ ಮುರಿಯುವ ಇಂಥವರಿಂದಾಗಿ ತಂತಿಯ ಮೇಲಿನ ನಡಿಗೆ, ಸರ್ಕಸ್ ಮಾಡುವುದು ಎಂಬ ಉಪಮೇಯಗಳನ್ನು ಇನ್ನು ಮುಂದೆ ಕಿತ್ತು ಹಾಕಬೇಕಾಗಬಹುದು.

ಈ ಬೆಕ್ಕು ತಾರಾ ಕ್ಯಾಲಿಫೋರ್ನಿಯಾದಲ್ಲಿ ಈಚೆಗೆ ನಡೆದ ಬೇಸ್‌ಬಾಲ್ ಪಂದ್ಯಾವಳಿಯಲ್ಲಿ ಟಾಸ್ ಹಾಕುವ ಅದೃಷ್ಟ ಪಡೆಯಿತು. ತಂಡವೊಂದರ ನಾಲ್ಕು ವರ್ಷ ವಯಸ್ಸಿನ ಮಗನನ್ನು ನಾಯಿಯ ದಾಳಿಯಿಂದ ರಕ್ಷಿಸಿದ್ದಕ್ಕೆ ಈ ಬೆಕ್ಕಿಗೆ ಟಾಸ್ ಗೌರವ ಸಿಕ್ಕಿತಂತೆ. ಈ ಗೌರವದ ಸುಳಿವು ನಾಯಿಗೆ ಮೊದಲೇ ಗೊತ್ತಿದ್ದರೆ...!



ಅಮೆರಿಕಾದಲ್ಲಿ 'ಹಿಡನ್ ಕ್ಯಾಷ್' ಎಂಬ ಸಾಮೂಹಿಕ ಕ್ರೇಜ್ ಶುರುವಾಗಿದೆ. ಲಕೋಟೆಯಲ್ಲಿ ಹಣ ಹಾಕಿ ಎಲ್ಲಿಲ್ಲಿ ಇಡಲಾಗಿದೆ ಎಂದು ಅಪರಿಚಿತ ವ್ಯಕ್ತಿಯೊಬ್ಬ ಟ್ವಿಟರ್‌ನಲ್ಲಿ ಸೂಚನೆ ನೀಡುತ್ತಾನಂತೆ. ಅದನ್ನು ಅನುಸರಿಸಿದ ಇಬ್ಬರಿಗೆ ಈಗಾಗಲೇ 50, 100 ಡಾಲರ್‌ಗಳು ಸಿಕ್ಕಿವೆಯಂತೆ. ಶೀಘ್ರದಲ್ಲೇ 'ಹಿಡನ್ ಕ್ಯಾಷ್' ಭಾರತದಲ್ಲೂ ದೊರಕಬಹುದು ಎಂಬ ಸುದ್ದಿಯೂ ಹರಿದಾಡುತ್ತಿದೆ. ಅದು ಡಾಲರ್‌ನಲ್ಲಿರುತ್ತದೋ, ರೂಪಾಯಿನಲ್ಲಿರುತ್ತದೋ!